ಸಿ.ಸಿ..ನಂ.81–24

ಪಿ.ಡಬ್ಲ್ಯೂ–1

ದಿನಾಂಕ.29–10–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ವಿ.ಎಸ್ ವಕೀಲರಿಂದಃ**

1. ಈ ಪ್ರಕರಣವು ರೂ 1,21,970/– ಗೆ ಹಾಕಲಾಗಿದೆ . ಇನ್ನೊಂದು ಚೆಕ್ ಪ್ರಕರಣವು ಎಷ್ಟು ಮೊತ್ತದ ಹಣಕ್ಕೆ ಹಾಕಲಾಗಿರುತ್ತದೆ ಎಂದು ನನಗೆ ಈಗ ನೆನಪಿಲ್ಲ. ಆ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಸಾಕ್ಷಿಗೆ ತೋರಿಸಿ ಗುರುತಿಸಲು ಬರುತ್ತದೆಯಾ ಎಂದು ಕೇಳಿದಾಗ ಸಾಕ್ಷಿ ಸದ್ರಿ ದಾಖಲಾತಿ ನೋಡಿ ಒಪ್ಪಿಕೊಂಡಿರುತ್ತಾರೆ . ಸದ್ರಿ ಆ ಪ್ರಕರಣದ ಚೆಕ್ , ಹಿಂಬರಹ , ಅಂಚೆ ಸ್ವಿಕೃತಿ ಪತ್ರ , ಲಿಗಲ್ ನೋಟಿಸು , ಠರಾವಿನ ಪ್ರತಿ , ಸಾಲದ ಅರ್ಜಿ , ಬದ್ರತಾ ಪತ್ರಗಳು , ಸಾಲದ ತೆಗೆದುಕೊಳ್ಳುವ ಬಗ್ಗೆ ಕಬೂಲಾತಿ , ಸಾಲದ ಕರಾರು ಪತ್ರ , ಕ್ಯಾಷ ಕ್ರೆಡಿಟ್ ಸಾಲದ ಖಾತೆ , ಮತ್ತು ವೊಚರ ಇವುಗಳನ್ನು ಒಟ್ಟಾರೆಯಾಗಿ ನಿಡಿ–1 ಎಂದು ಗುರುತಿಸಲಾಯಿತು . ಸದ್ರಿ ವೊಚರ ಮೇಲೆ ಸಹಿಯನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಎಂದರೆ ಸಾಲ ಮಾಡಲು ಬಂದ ದಿನ ತೆಗೆದುಕೊಳ್ಳಲಾಗುತ್ತದೆ . ಸದ್ರಿ ವೋಚರ ಸಾಲದ ಅರ್ಜಿಯ ಜೊತೆಗೆ ಲಗತ್ತಿಸಿ ಕೊಡಲಾಗುತ್ತದೆಯಾ ಎಂದರೆ ಇಲ್ಲ . ಹಾಗಾದರೆ ಯಾವಾಗ ಕೊಡಲಾಗುತ್ತದೆ ಎಂದರೆ ಅವರು ಇಷ್ಟು ಸಾಲ ಬೇಕು ಎಂದು ಬರೆದು ಕೊಟ್ಟಾಗ ನಾವು ಇಷ್ಟು ಸಾಲ ಎಂದು ವೋಚರ ಮೇಲೆ ಅವರ ಮುಂದೆ ಬರೆದು ಕೊಟ್ಟು ಅವರ ಸಹಿ ಪಡೆದುಕೊಳ್ಳುತ್ತೇವೆ .ಆ ಪ್ರಕಣದಲ್ಲಿರುವ ನಿಪಿ–6 ಯಾವಾ ದಿನಾಂಕದಂದು ಇದನ್ನು ಕೊಡಲಾಗಿರುತ್ತದೆ ಮತ್ತು ಯಾವ ದಿನಾಂಕದಂದು ಠರಾವು ಆಗಿರುತ್ತದೆ ಎಂದು ಅದರಲ್ಲಿ ನಮೂದು ಇಲ್ಲ ಎಂದರೆ ಮೂಲ ಪ್ರತಿಯಲ್ಲಿ ಅದರ ಬಗ್ಗೆ ನಮೂದು ಆಗಿರುತ್ತದೆ . ಮೂಲ ಪ್ರತಿ ನ್ಯಾಯಾಲಯಕ್ಕೆ ಹಾಜರ ಪಡಿಸಿಲ್ಲ ಎಂದರೆ ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ .

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲಾತಿ ಹಾಜರು ಪಡಿಸಿ ಗುರುತಿಸಿಕೊಂಡಿರುತ್ತಿರೊ ಇಲ್ಲವೊ ಎಂದರೆ ಎಲ್ಲಾ ದಾಖಲಾತಿ ಹಾಜರು ಪಡಿಸಿರುತ್ತೇನೆ . ದಾಖಲಾತಿ ಅವಶ್ಯ ಇದ್ದಲ್ಲಿ ಅವುಗಳನ್ನು ಸಹ ಹಾಜರು ಪಡಿಸುತ್ತೇನೆ . ಒಂದು ಸಾಲಗಾರನಿಗೆ ಎರಡು ಶಾಖೆಯಲ್ಲಿ ಸಾಲ ಕೊಡಬಹುದು ಎಂದು ನಿಮ್ಮ ಬೈಲಾದಲ್ಲಿ

ಇರುತ್ತದೆಯಾ ಎಂದರೆ ಹೌದು ಕೊಡಬಹುದು . ಆ ರೀತಿಯಾಗಿ ಬೈಲಾದಲ್ಲಿ ನಮೂದಾದ ಬಗ್ಗೆ ಬೈಲಾ ಹಾಜರು ಪಡಿಸಬಹುದಾ ಎಂದರೆ ಹಾಜರ ಪಡಿಸುತ್ತೇನೆ. ಬೇರೆ ಬೇರೆ ಶಾಖೆಗಳಲ್ಲಿ ಸಾಲದ ಅರ್ಜಿಯನ್ನು ಸಲ್ಲಿಸಿದಾಗ ಸಾಲದ ಅರ್ಜಿಯನ್ನು ಯಾರು ಸ್ಕ್ರೂಟನಿ ಮಾಡುತ್ತಾರೆ ಎಂದರೆ ಆಯಾ ಶಾಖೆಯ ಶಾಖಾಧಿಕಾರಿಗಳು ಸ್ಕ್ರೂಟನಿ ಮಾಡುತ್ತಾರೆ . ಬೇರೆ ಇನ್ನೊಂದು ಶಾಖೆಯಲ್ಲಿ ಸಾಲ ಪಡೆದುಕೊಂಡಿರುತ್ತಾರೆ ಎಂದು ಶಾಖಾಧಿಕಾರಿಗಳು ಪರಿಶೀಲನೆ ಮಾಡುತ್ತಾರಾ ಎಂದರೆ ಅದರ ಬಗೆ ಮುಖ್ಯ ಶಾಖೆಗೆ ಕರೆ ಮಾಡಿ ತಿಳಿದುಕೊಂಡು ಮುಖ್ಯ ಶಾಖೆಯವರು ಸಾಲ ವನ್ನು ಮಂಜೂರು ಮಾಡಿ ಎಂದು ಹೇಳಿದಾಗ ಸಾಲ ಕೊಡುತ್ತೇವೆ .2 ಸಾಲಕ್ಕೆ ಸಂಬಂಧಿಸಿದಂತಹ ದಾಖಲಾತಿಗಳು ಪರಿಶೀಲನೆಗೆ ಹೋಗುತ್ತದೆಯಾ ಎಂದರೆ ಆಯಾ ಶಾಖೆಯ ಶಾಖಾಧಿಕಾರಿಗಳು ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಪರಿಶೀಲನೆ ಮಾಡುತ್ತಾರೆ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮುಖ್ಯ ಶಾಖೆಯಲ್ಲಿ ಇರುತ್ತಾರೆ . ಅವರು ಎಲ್ಲಾ ಶಾಖೆಗೆ ಸೇರಿ ಒಂದೇ ಅಧಿಕಾರಿ ಯಾಗಿರುತ್ತಾರೆ . ಈ ಎರಡು ಶಾಖೆಯಲ್ಲಿ ಸಂಬಂಧಿಸಿದ ದಾಖಲಾತಿಗಳು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಳಿ ಹೋಗಿರುತ್ತದೆಯೋ ಇಲ್ಲವೊ ಎಂದರೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಸಾಲ ನೀಡುವ ಪೂರ್ವದಲ್ಲಿ ಆಯಾ ಶಾಖೆಗೆ ಹೋಗಿ ಪರಿಶೀಲನೆ ಮಾಡಿ ಹೋಗುತ್ತಾರೆ . ಈ ಆರೋಪಿಗೆ ಸಂಬಂಧಿಸಿದಂತಹ ಎರಡು ಖಾತೆಗೆ ಸಂಬಂಧಿಸಿದಂತೆ ದಾಖಾಲತಿಗಳನ್ನು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಯಾವಾಗ ಪರಿಶೀಲನೆ ಮಾಡಿರುತ್ತಾರೆ ಎಂದರೆ ನೆನಪಿಲ್ಲ . ಎರಡು ಸಾಲದ ಕಾಗದ ಪತ್ರ ತೋರಿಸಿದರೆ ಅದನ್ನು ನೋಡಿ ಹೇಳಬಹುದಾ ಎಂದರೆ ಸಾಧ್ಯ ಇಲ್ಲ .ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಎರಡು ಸಾಲಕ್ಕೆ ಸಬಂಧಿಸಿದಂತಹ ಕಾಗದಪತ್ರಗಳನ್ನು ಪರಿಶೀಲನೆ ಮಾಡಿ ನೊಡಿರುತ್ತಾರೊ ಇಲ್ಲವೊ ಎಂದರೆ ಪರಿಶೀಲನೆ ಮಾಡಿ ನೋಡಿರುತ್ತಾರೆ . ಪರಿಶೀಲನೆ ಮಾಡಿ ನೋಡಿದಾಗ ಏನಾದರೂ ತಪ್ಪು ಗಳು ಕಂಡು ಬಂದರೆ ಅದರ ಬಗ್ಗೆ ಕಾರ್ಯ ನಿರ್ವಹಣಾಧಿಕಾರಿಗಳು ಕ್ರಮ ತೆಗೆದುಕೊಳ್ಳುತ್ತಾರೆ ಎಂದರೆ ಸರಿ . ಎರಡು ಪ್ರಕರಣಕ್ಕೆ ಸಂಬಂದಿಸಿದಂತೆ ಕಾಗದ ಪತ್ರಗಳನ್ನು ನೀವು ಸಹ ಪರಿಶೀಲನೆ ಮಾಡಿರುತ್ತೀರಿ ಎಂದರೆ ಹೌದು . ಎರಡು ಪ್ರಕರಣಗಳಲ್ಲಿ ಇರುವ ದಾಖಲಾತಿಗಳಲ್ಲಿ ಆರೋಪಿಯ ಸಹಿಯಲ್ಲಿ ವ್ಯತ್ಯಾಸ ಇರುವುದು ನಿಮ್ಮ ಗಮನಕ್ಕೆ ಬಂದಿರುತ್ತದೆಯಾ ಎಂದರೆ ಅವರ ಸಹಿ ಮಾಡಿರುತ್ತಾರೆ . ಸಹಿ

ಯಲ್ಲಿ ವ್ಯತ್ಯಾಸ ಇರುವ ಬಗ್ಗೆ ನಿಮ್ಮ ಗಮನಕ್ಕೆ ಬಂದಿರುತ್ತದೆಯಾ ಎಂದರೆ ಸ್ವಲ್ಪ ಇರುವ ಬಗ್ಗೆ ನನ್ನ ಗಮನಕ್ಕೆ ಬಂದಿರುತ್ತದೆ . ಸ್ವಲ್ಪ ವ್ಯತ್ಯಾಸ ಎಂದರೆ ಏನು . ಒಂದು ಕಾಗದ ಪತ್ರದಲ್ಲಿ ಕನ್ನಡದಲ್ಲಿ ಸಹಿ ಇನ್ನೊಂದು ಕಾಗದ ಪತ್ರದಲ್ಲಿ ಇಂಗ್ಲಿಷ ಸಹಿ ಹಾಕಿರುತ್ತಾರೆ . ಈ ರೀತಿಯಾಗಿ ಒಂದು ಕಾಗದ ಪತ್ರದಲ್ಲಿ ಕನ್ನಡ ದಲ್ಲಿ ಸಹಿ , ಇನ್ನೊಂದು ಕಾಗದ ಪತ್ರದಲ್ಲಿ ಇಂಗ್ಲಿಷದಲ್ಲಿ ಸಹಿ ಹಾಕಿರುತ್ತೀರಿ ಎಂದು ನೋಟಿಸನಲ್ಲಾಗಲಿ ,ದೂರಿನಲ್ಲಾಗಲಿ ಅಥವಾ ಪ್ರಮಾಣ ಪತ್ರದಲ್ಲಾಗಲಿ ಕಾಣಿಸಿರುತ್ತೀರಾ ಎಂದರೆ ಇಲ್ಲ . ಎರಡು ಕಾಗದ ಪತಗಳಲ್ಲಿ ಜಾಮಿನುದಾರರ ಸಹಿಯಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿರುವ ಜಾಮಿನುದಾರರ ಹೆಸರು ನಾಗೇಶ ಬಿರಪ್ಪಾ ಗಾಂವಕಾರ ಮತ್ತು ಮಂಗಲಾ ಮೋಹನ ಗಾಂವಕಾರ ಆ ಪ್ರಕರಣದಲ್ಲಿ ಜಾಮಿನುದಾರರ ಹೆಸರು ಮಂಗಲಾ ಗಾಂವಕಾರ ಮತ್ತು ಸಂತೋಷ ವೆಂಕಪ್ಪ ನಾಯ್ಕ ಆಗಿರುತ್ತಾರೆ . ಮಂಗಲಾ ಮೋಹನ ಗಾಂವಕಾರ ರವರು ಎರಡು ಪ್ರಕರಕಣದಲ್ಲಿ ಜಾಮಿನುದಾರರರು ಎಂದರೆ ಸರಿ . ಮಂಗಲಾ ಮೋಹನ ಗಾಂವಕಾರ ರವರ ಸಹಿ ಎರಡು ಪ್ರಕರಣದಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ . ಸಾಕ್ಷಿಗೆ ನಿಪಿ–7 ರಲ್ಲಿರುವ ಮಗಲಾ ಗಾಂವಕಾರ ರವರ ಸಹಿ ನೋಡಿ ಸಾಕ್ಷಿ ನೋಡಿ ಗುರುಸಿರುವುದರಿಂದ ನಿಪಿ–7 (ಎ) ಎಂದು , ಈಗಾಗಲೇ ಗುರುತಿಸಲಾಗಿರುವ ನಿಡಿ–1 ರಲ್ಲಿರುವ ಸಾಲದ ಅರ್ಜಿಯಲ್ಲಿರುವ ಜಾಮಿನುದಾರರ ಸಹಿಯನ್ನು ತೋರಿಸಲಾಗಿದ್ದು ಅದರಲ್ಲಿರುವ ಮಂಗಲಾ ರವರ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಡಿ–1 (ಎ) ಎಂದು ಗುರುತಿಸಲಾಯಿತು . ನಿಪಿ–7 (ಎ) ದಲ್ಲಿ ಮಂಗಲಾ ಎಂದು ಮಾತ್ರ ಬರೆದಿದ್ದು , ನಿಡಿ–1(ಎ) ದಲ್ಲಿ ಮಂಗಲಾ ಮೋಹನ ಗಾಂವಕಾರ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ . ಸಾಕ್ಷಿ ಪುನಃ ಎರಡು ಸಹಿ ಯನ್ನು ಅವರೆ ಹಾಕಿ ಕೊಟ್ಟಿರುತ್ತಾರೆ .. ಮಂಗಲಾ ಗಾಂವಕಾರ ಹಾಗೂ ಷದ್ರಿ ಆರೋಪಿಯು ಬೇರೆ ಬೇರೆ ರೀತಿಯಾದ ಸಹಿ ಹಾಕುತ್ತಾರೆ ಎಂದು ಬೇರೆ ಯಾವುದಾದರೂ ಪ್ರಕರಣ ಮಾಡಿರುತ್ತೀರಾ ಎಂರದ ಇಲ್ಲ .ಕಾಗದ ಪತ್ರದಲ್ಲಿ ಸಹಿ ಯಲ್ಲಿ ವ್ಯತ್ಯಾಸ ಮಾಡಿ ಸಾಲ ಪಡೆದುಕೊಳ್ಳುವುದು ತಪ್ಪು ಎಂದು ನಿಮಗೆ ಗೊತ್ತಿರುತ್ತದೆ ಎಂದರೆ ಸರಿ . ಎರಡು ಪ್ರಕರಣದ ಸಂಬಂಧಿಸಿದ ಚೆಕ್ ನಲ್ಲಾಗಲಿ ಕಾಗದ ಪತ್ರದಲ್ಲಾಗಲಿ ಆರೋಪಿಯ ಸಹಿ ಇಲ್ಲ ಎಂದರೆ ಸರಿಯಲ್ಲ . ಆರೋಪಿಯದ್ದು ಮತ್ತು ಮಂಗಲಾ ರವರ ಸಹಿ ಯನ್ನು ನೀವು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ .

ಕಾಗದ ಪತ್ರ ಸರಿಯಾಗಿದ್ದರೆ ನೀವು ABN ಪ್ರರಕಣ ಮಾಡುತ್ತೀರಿ ಎಂದರೆ ಸರಿ . ಈ ಆರೋಪಿಗೆ ಸಂಬಧಿಸಿದಂತೆ ABN ಪ್ರಕರಣ ಮಾಡಿಲ್ಲ ಎಂದರೆ ಸರಿ . ಈ ಎರಡು ಕಾಗದ ಪತ್ರಗಳನ್ನು ನೀವು ಸೃಷ್ಟಿ ಮಾಡಿ ಕೊಂಡಿರುವುರಿಂದ ನೀವು ಅವುಗಳ ಆಧಾರವಾಗಿ ABN ಪ್ರಕರಣ ಮಾಡಿಲ್ಲ ಎಂದರೆ ಸರಿಯಲ್ಲ..

3. ಜಾಮಿನು ಬದ್ರತೆಗಾಗಿ ಎರಡು ಜಾಮಿನನನ್ನು ಪಡೆದುಕೊಂಡಿರುತ್ತೇವೆ ಎಲ್ ಆಯ.ಸಿ ಬಾಂಡ ಪಡೆದುಕೊಂಡಿಲ್ಲ . ಈ ಪ್ರಕರಣದಲ್ಲಿ ಎಷ್ಟು ಮೊತ್ತದ ಸಾಲಕ್ಕೆ ಅರ್ಜಿ ಕೊಟ್ಟಿದ್ದರು ಎಂದರೆ ರೂ 80 ಸಾಲಕ್ಕೆ ಅರ್ಜಿ ಕೊಟ್ಟಿದ್ದರು . ಅವರಿಗೆ ರೂ 57 ಸಾವಿರ ಸಾಲ ಮಂಜೂರು ಅಗಿರುತ್ತದೆ . ಷದ್ರಿ ರೂ 57 ಸಾವಿರ ಹಣವನ್ನು ಆರೋಪಿಯ ಎಸ್ ಬಿ ಖಾತೆ ಹಾಕಲಾಗಿರುತ್ತದೆ ಸಾಲದ ಖಾತೆಯಿಂದ ಎಸ್ ಬಿ ಖಾತೆ ಗೆ ಹಾಕಲಾಗಿರುತ್ತದೆ . ಎರಡು ಖಾತೆಗಳು ಅಂದರೆ ಸಾಲದ ಖಾತೆ ಹಾಗೂ ಎಸ್ ಬಿ ಖಾತೆ . ನಮ್ಮ ಸಂಸ್ಥೆ ಯಲ್ಲಿ ಇರತ್ತದೆ . ಎಸ್ ಬಿ ಖಾತೆಯಿಂದ ಹಣವನ್ನು ಆತನು ವಿತ್ ಡ್ರಾವಲ್ ಮೂಲಕ ಪಡೆದುಕೊಂಡಿರುತ್ತಾನೆ . ಆ ವಿತ್ ಡ್ರಾವಲ್ ವೋಚರ ಬ್ಯಾಂಕಿನಲ್ಲಿ ಇರುತ್ತದೆ . ಆ ವಿತ್ ಡ್ರಾವಲ್ ವೋಚರ ನ್ಯಾಯಾಲಯಕ್ಕೆ ಹಾಜರು ಪಡಿಸಿದರೆ ಆರೋಪಿ ಸಾಲ ಪಡೆದುಕೊಂಡಿರುತ್ತೇನೆ ಎಂದು ಸಾಬಿತು ಪಡಿಸಬಹುದು ಎಂರೆ ಸರಿ . ಸದಿರ ವಿತ್ ಡ್ರಾವಲ್ ವೋಚರ ವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು ಎಂದರೆ ಸರಿ . ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿಪಿ-12 ಸಾಲದ ಖಾತೆಗೆ ಸಬಂಧಿಸಿದ ಸ್ಟೇಟಮೆಂಟ ಆಗಿರುತ್ತದೆ . ನಿಪಿ-12 ರಲ್ಲಿ ನಿಮ್ಮ ಸೊಟೈಟಿ ಗೆ ಚೆಕ್ ನಲ್ಲಿ ನಮೂದಿಸಿದ ಹಣ ಚೆಕ್ ನಲ್ಲಿ ನಮೂದಿಸಿದ ದಿನಾಂಕದಂದು ನಿಮ್ಮ ಸಂಸ್ಥೆ ಗೆ ಬರಬೇಕು ಎಂದು ನಮೂದು ಆಗಿರುವುದಿಲ್ಲ ಎಂದರೆ ಹಣ ತುಂಬಿದ ಬಗ್ಗೆ ಹಾಗೂ ಅಸಲಿನ ಬಗ್ಗೆ ಮಾತ್ರ ಅದರಲ್ಲಿ ನಮಾದು ಅಗಿರುತ್ತದೆ . ನಾವು ಬಡ್ಡಿ ಸೇರಿಸಿ ಅದರಲ್ಲಿ ಬರೆಯುವುದಿಲ್ಲ . ಚೆಕ್ ನಮೂದಿಸಿದ ಹಣ ನಿಮ್ಮ ಸಂಸ್ಥೆ ಗೆ ಬರಬೇಕು ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿರುತ್ತೀರಾ ಎಂದರೆ ಅದರ ಬಗ್ಗೆ ನಿಪಿ-12 ನ್ನು ಹಾಜರು ಪಡಿಸಲಾಗಿರುತ್ತದೆ . ನಿಪಿ-12 ರಲ್ಲಿ ನಮೂದಿಸಿದ ರೂ 25,ರೂ 89, ರೂ 3,000 ಏನು ಅಂದರೆ ಚೆಕ್ ಬೌನ್ಸ ಆದ ಬಗ್ಗೆ ಚಾರ್ಜಸ್ ಇರಬಹುದು . ಚೆಕ್ ಬೌನ್ಸ ಆದ ಬಗ್ಗೆ ಚಾರ್ಜಸ್ ಆರೋಪಿಗೆ ಬರುತ್ತದೆ . ಚೆಕ್ ಬೌನ್ಸ ಆದರೆ ಹೇಗೆ ರೂ 25 ಚಾರ್ಜ ಆಗುತ್ತದೆ ಎಂದರೆ ಅದರ ಚಾರ್ಜಸ್ ನಮ್ಮ ಅಕೌಂಟ್ ದಿಂ ಕಟ್ ಆಗುತ್ತದೆ ಅದರೆ ಅದನ್ನು ತುಂಬುವ ಹೊಣೆಗಾರಿಕೆ ಅರೋಪಿಗೆ ಬರುತ್ತದೆ . ರೂ

89 ಮುತ್ತು 3 ಸಾವಿರ ಎನು ಎಂದು ನನಗೆ ಗೊತ್ತಿಲ್ಲ . ಈ ಮೇಲೆ ಹೇಳಿದ ಹಣವನ್ನು ಎಲ್ಲಾ ಅಸಲಿಗೆ ಸೇರಿಲಾಗುತ್ತದೆ ಎಂದರೆ ಹೌದು . ನಿಪಿ–12 ರ ಪ್ರಕಾರ ಸಾಲ ಮಂಜೂರು ಅದ ದಿನಾಂಕ 21–03–2017.ಸದ್ರಿ ನಿಪಿ–12 ರಲ್ಲಿರುವ ದಿಃ20–02–2017 ಎಂದರೆ ಮಂಜೂರಿ ಮಾಡಬೇಕು ಎಂದು ಹೇಳಿದ ದಿನಾಂಕವಾಗಿರುತ್ತದೆ . ಆಡಳಿತ ಮಂಡಳಿಯವರು ಆ ರೀತಿಯಾಗಿ ಹೇಳಿರುತ್ತಾರೆ .

4. ಆರೋಪಿಗೆ ಸೇರಿದ ಮನೆ ಇದೆ ಎಂದು ಕಾಗದ ಪತ್ರವನ್ನು ನೋಡಿರುತ್ತೀರಾ ಎಂದರೆ ಮನೆ ನೋಡಿರುತ್ತೇನೆ ಕಾಗದ ಪತ್ರ ನೊಡಿಲ್ಲ . ಆ ಮನೆ ಅರೋಪಿಗೆ ಸೇರಿದ್ದು ಎಂದು ಅಲ್ಲಿದ್ದವರು ನಾವು ರಿಕವರಿಗೆ ಹೋದಾಗ ಹೇಳಿದ್ದರು . ರಿಕವರಿಗೆ ಹೋಗುವ ಮೊದಲು ಅವರ ಮನೆಯನ್ನು ನಾವು ಅವರಿಗೆ ಸಾಲ ಕೊಡುವ ಸಮಯದಲ್ಲಿ ಅವರು ಎಲ್ಲಿರುತ್ತಾರೆ ಅವರ ಮನೆ ಎಲ್ಲಿರುತ್ತವೆ ಎಂದು ನೋಡಿರುತ್ತೇವೆ . ಆರೋಪಿಯ ವಿಳಾಸ ಪೂಜಗೇರಿ ಅಗಿರುತ್ತದೆ . ಪೋಸ್ಟ ಯಾವುದು ಎಂದು ನನಗೆ ನೆನಪಿಲ್ಲ ಬಾಸಗೋಡ ಆಗಿರಬಹುದು ಪೂಜಗೇರಿ ಯಲ್ಲಿ ಪೋಸ್ಟ ಅಫೀಸ ಇಲ್ಲ ಎಂದರೆ ನನಗೆ ಗೊತ್ತಿಲ್ಲ . ನಮ್ಮ ಪಿರ್ಯಾದಿಯಲ್ಲಿ ಆರೋಪಿಯ ವಿಳಾಸವನ್ನು ಪೂಜಗೇರಿ ಪೋಸ್ಟ ಬಾಸಗೋಡ ಅಂಕೋಲಾ ತಾಲೂಕು ಎಂದು ಕಾಣಿಸಲಾಗಿರುತ್ತದೆ . ನಿಪಿ–5 ರ ನೋಟಿಸಿನಲ್ಲಿ ಪೋಸ್ಟ ನ ಬಗ್ಗೆ ಹಾಗೂ ಪಿನ ಕೋಡ ಬಗೆಗ ನಮೂದು ಇಲ್ಲ ಎಂದರೆ ಊರ ಹೆಸರು ಪೂಜಗೇರಿ ಎಂದು ನಮೂದು ಅಗಿರುತ್ತದೆ . ನೀವು ಉದ್ದೇಶ ಪುರಕವಾಗಿ ಪೋಸ್ಟ ಬಾಸಗೋಡ ಎಂದು ಮತ್ತು ಬಾಸಗೋಡಿನ ಪಿನ ಕೋಡ ನಮೂದು ಮಾಡಿಲ್ಲ ಎಂದರೆ ಅಂಕೋಲಾ ತಾಲೂಕಿನಲ್ಲಿ ಪೂಜಗೇರಿ ಒಂದೇ ಇರುತ್ತದೆ . ಅಲ್ಲಿಯೇ ಆರೋಪಿಯ ಮನೆ ಇರುತ್ತದೆ . ಬಾಸಗೋಡ ಎಂದು ನಮೂದು ಮಾಡಿದ್ದರೆ ಆತನಿಗೆ ನೀವು ಕಳುಹಿಸಿರುವ ನೋಟಿಸು ಜಾರಿ ಯಾಗುತ್ತಿತ್ತು . ನೀವು ಪೋಸ್ಟ ಬಾಸಗೋಡ ಎಂದು ಕಾಣಿಸದೆ ಇದ್ದುದ್ದಕ್ಕೆ ಸದ್ರಿ ಲಿಗಲ್ ನೋಟಿಸು ಜಾರಿಯಾಗಿಲ್ಲ ಎಂದರೆ ಸರಿಯಲ್ಲ . ನೀವು ನೋಟಿಸು ಜಾರಿಯಾಗಬಾರದು ಎಂಬ ಕಾರಣದಿಂದ ಅರ್ಧ ವಿಳಾಸ ಬರೆದಿರುತ್ತೀರಿ ಎಂದರೆ ಸರಿಯಲ್ಲ .

5. ರಿನಿವಲ್ ಮಾಡಬೇಕಾದರೆ ಮೊದಲು ಒಂದು ಸಾಲ ಇರಬೇಕು ಎಂದರೆ ಸರಿ . ಈ ಸಾಲಕ್ಕೆ ಸಂಬಂಧಪಟ್ಟಂತೆ ಮುಂಚೆ ಆರೋಪಿಯ ಯಾವ ಸಾಲ ಇತ್ತು ಎಂದರೆ ಇದು ರಿನಿವಲ್ ಸಾಲದ ಪ್ರಕರಣ ಅಲ್ಲ . ಇದು ಹೊಸ ಸಾಲ . ಇದು ವ್ಯವಹಾರಕ್ಕೆ ತೆಗೆದುಕೊಂಡ ಸಾಲ ವಾಗಿರುತ್ತದೆ .

( ಈ ಹಂತದಲ್ಲಿ ಆರೋಪಿ  ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ,

ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು  ಮಾಡಿಸಲಾಯಿತು)

ಓ  ಹೇ ಕೆ ಸರಿ ಇದೆ.

ಹಿರಿಯ  ಸಿವಿಲ್  ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.